## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ

## ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ

**ಸಿ ಸಿ ಸಂಖ್ಯೆಃ 1458/2022 ಸಿಡಬ್ಲ್ಯೂ ಃ 1**

**ಪಿಡಬ್ಲ್ಯೂ ಃ 1**

**ಸಾಕ್ಷಿದಾರರ ಹೆಸರು ಃ ಸಿದ್ದಪ್ಪ**

**ತಂದೆಯ ಹೆಸರು ಃ ಅಪ್ಪಣ್ಣ ಹೆಗಡೆ**

**ವಯಸ್ಸು ಃ 46 ವರ್ಷ**

**ಉದ್ಯೋಗ ಃ ಕುರಿ ಸಾಕಾಣಿಕೆ**

**ವಾಸ ಃ ಅಕ್ಕೊಳ**

**ದಿನಾಂಕಃ 27.09.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

**1.** ನಾನು ಹೆಬ್ಬೆಟ್ಟು ಹಾಕುತ್ತೇನೆ. ದೂರಿನಲ್ಲಿ ನನ್ನ ಹೆಬ್ಬೆಟ್ಟು ಗುರುತು ಇದೆ. ಸಾಕ್ಷಿಯು ತನ್ನ ಹೆಬ್ಬೆಟ್ಟು ಗುರುತು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 1 ಎಂದು, ಹೆಬ್ಬೆಟ್ಟು ಗುರುತನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ದಿನಾಂಕ 13.08.2022 ರಂದು ನಾವು ರೋಡ ಹಿಡಿದಕೊಂಡು ಕುರಿಗಳನ್ನು ಕುಷ್ಟಗಿಯಿಂದ ಗಜೇಂದ್ರಗಡದ ಕಡೆಗೆ ಹೊಡೆದುಕೊಂಡು ಹೋಗುತ್ತಿದ್ದೇವು. ಕೆರೆಯ ಪಕ್ಕದಲ್ಲಿ ಇರುವ ರಸ್ತೆಯಲ್ಲಿ ಗಡದ ಕಡೆಯಿಂದ ಕುಷ್ಟಗಿ ಕಡೆಗೆ ಒಂದು ಲಾರಿ ಬರುತ್ತಿತ್ತು. ಸದರಿ ದಿನ ಮೃತ ಯಲ್ಲಪ್ಪ ಕುರಿಯ ಮುಂದೆ ಇದ್ದ. ನನಗೆ ಸೇರಿದ 150 ಕುರಿ ಹಾಗೂ ಮೃತನಿಗೆ ಸೇರಿದ 20 ಕುರಿ ಇದ್ದು, ಕೂಡಿ ಮೇಯಿಸುತ್ತಿದ್ದೇವು. ಸದರಿ ದಿನ ಟಿಪ್ಪರ ಲಾರಿ ಚಾಲಕ ವೇಗವಾಗಿ ಬಂದು ಮೊದಲು ಯಲ್ಲಪ್ಪನಿಗೆ ಡಿಕ್ಕಿ ಪಡಿಸಿ ನಂತರ ಕುರಿಯ ಮೇಲೆ

ಹತ್ತಿಸಿರುತ್ತಾನೆ. ಅದರಿಂದ 19 ಕುರಿ ಸತ್ತಿರುತ್ತವೆ ಹಾಗೂ 20 ರಿಂದ  22 ಕುರಿಗಳಿಗೆ ಗಾಯ ಆಗಿರುತ್ತದೆ. ಯಲ್ಲಪ್ಪ ಅವರಿಗೆ ತಲೆಗೆ, ಬಲ ಕೈಗೆ ಮತ್ತು ಕಾಲಿಗೆ ಹೊಡೆತ ಬಿದ್ದು ಆತ ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾನೆ. ಸದರಿ ಗಾಡಿ ಸಂಖ್ಯೆ ಕೆಎ 20/7745. ಸದರಿ ಗಾಡಿಯನ್ನು ಬಸವರಾಜ ಚಂದ್ರಶೇಖರ ಅವರು ಚಾಲನೆ ಮಾಡುತ್ತಿದ್ದರು. ಆತ ಅಪಘಾತ ಆದ ತಕ್ಷಣ ಓಡಿ ಹೋಗುತ್ತಿದ್ದ ಆಗ ನಾವು ಆತನನ್ನು ಹಿಡಿದು ಹೆಸರು ಕೇಳಿರುತ್ತೇವೆ. ನಂತರ ನಾವು ಪೊಲೀಸರಿಗೆ ಕರೆ ಮಾಡಿರುತ್ತೇವೆ. ನಂತರ ಮೃತನ ಶವವನ್ನು ಸರ್ಕಾರಿ ಆಸ್ಪತ್ರೆಗೆ ತಂದಿರುತ್ತೇವೆ. ನಂತರ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

2. ನಂತರ ಶವಾಗಾರಕ್ಕೆ ಹೋಗಿರುತ್ತೇವೆ. ಅಲ್ಲಿಂದ ಸ್ಥಳಕ್ಕೆ ಹೋಗಿರುತ್ತೇವೆ. ಎರಡು ಸ್ಥಳದಲ್ಲಿ ಪಂಚನಾಮೆ ಮತ್ತು ಪೊಟೊಗಳನ್ನು ತೆಗೆದಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ಚಾಸಾ  2 ಮತ್ತು 3 ಇದ್ದರು. ಸಾಕ್ಷಿಯು ಶವ ಪಂಚನಾಮೆಯನ್ನು ಮತ್ತು ಶವ ಪಂಚನಾಮೆ ಪೊಟೊ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆ ಮತ್ತು ಪೊಟೊ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ 4 ಮತ್ತು 2 ಪೊಟೋಗಳನ್ನು ಕ್ರಮವಾಗಿ ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆಯಲ್ಲಿರುವ ಹೆಬ್ಬೆಟ್ಟು ಗುರುತನ್ನು ನಿಪಿ 4 ಎ ಎಂದು ಗುರುತಿಸಲಾಯಿತು. ಕುರಿಗಳ ಸತ್ತ ಪೊಟೊವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 7 ಮತ್ತು 8 ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆಯ ಕಾಲಕ್ಕೆ ಚಾಸಾ 4 ಮತ್ತು 5 ಇದ್ದರು.

3. ದೂರನ್ನು ಚಾಸಾ 5 ರವರು ಬರೆದಿರುತ್ತಾರೆ. ಪಂಚನಾಮೆ ಆದ ನಂತರ ಪೊಲೀಸರು ಸ್ಥಳದಿಂದ ಗಾಡಿ ತೆಗೆದುಕೊಂಡು ಹೋಗಿರುತ್ತಾರೆ. ಪುನಃ ಪೊಲೀಸರು ನನ್ನನ್ನು ಕರೆದು ವಿಚಾರಣೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಆತನ ತಪ್ಪಿನಿಂದ ಅಪಘಾತ ಆಗಿದೆ ಎಂದು ನುಡಿಯುತ್ತಾರೆ. ನಾನು ಲಾರಿ ಪೊಟೊ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು

ಲಾರಿಯ ಫೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎ ಪಿ ವಕೀಲರಿಂದಃ</u>**

1. ನಾವು ಕುಷ್ಟಗಿಯಿಂದ ಸದರಿ ದಿನ ಹೋಗುತ್ತಿದ್ದೇವು. ಒಟ್ಟು 2 ಹಿಂಡು ಕುರಿ ಇದ್ದವು. ಒಂದು ಹಿಂಡಿನಲ್ಲಿ 170 ಕುರಿ, ಇನ್ನೊಂದು ಹಿಂಡಿನಲ್ಲಿ 200 ಕುರಿ ಇದ್ದವು. ಸದರಿ ದಿನ ಕುಷ್ಟಗಿಯನ್ನು ಬಿಟ್ಟಾಗ ಬೆಳಿಗ್ಗೆ 05.00 ಗಂಟೆ ಆಗಿತ್ತು. ಕುಷ್ಟಗಿಯಿಂದ ಮದಲಗಟ್ಟಿ ಕೆರೆ 5 ಕಿ.ಮೀ. ದೂರ ಇದೆ. 25 ನಿಮಿಷಗಳಲ್ಲಿ ಒಂದು ಕಿ.ಮೀ.ವರೆಗೆ ಕುರಿ ಹಿಂಡು ಹೋಗುತ್ತದೆ. 170 ಕುರಿ ಇದ್ದ ಹಿಂಡು ಮೊದಲು ಇತ್ತು. 170 ರಲ್ಲಿ ಮೃತ ಯಲ್ಲಪ್ಪನಿಗೆ ಸೇರಿದ 20 ಕುರಿ ಇದ್ದವು. ಆತನು ತನ್ನ ಕುರಿಗಳನ್ನು ನನ್ನ ಹಿಂಡಿನಲ್ಲಿ ಸೇರಿಸಿಕೊಂಡು ಹೋಗುತ್ತಿದ್ದೆವು. ನಾವು ಡಾಂಬರ ರಸ್ತೆಯ ಮೇಲೆ ಕುರಿಗಳನ್ನು ಹೊಡೆದುಕೊಂಡು ಹೋಗುತ್ತಿದ್ದೇವು.
2. ಘಟನಾ ಸ್ಥಳಕ್ಕೆ ಹೋದಾಗ 5.30 ಗಂಟೆಯಿಂದ 06.00 ಗಂಟೆ ಆಗಿತ್ತು. ಸದರಿ ಸಮಯದಲ್ಲಿ ಸ್ವಲ್ಪ ಬೆಳಕು ಇತ್ತು. ವಾಹನಗಳು ಲೈಟ ಹಾಕಿಕೊಂಡು ಬರುತ್ತಿದ್ದವು. ಸದರಿ ರಸ್ತೆಯಲ್ಲಿ 5 ನಿಮಿಷಕ್ಕೊಂದು ವಾಹನ ಸಂಚರಿಸುತ್ತವೆ.
3. ನನಗೆ ಓದಲು, ಬರೆಯಲು ಬರುವುದಿಲ್ಲ. ನನಗೆ ಗಾಡಿಗಳ ನಂಬರ ಹೇಳಲು ಬರುತ್ತದೆ. ಇಂಗ್ಲೀಷ ಅಂಕಿಗಳು ಸಹ ತಿಳಿಯುತ್ತವೆ. ಸದರಿ ಸಮಯದಲ್ಲಿ ಸಾಕಷ್ಟು ವಾಹನಗಳು ಸದರಿ ರಸ್ತೆಯಲ್ಲಿ ಸಂಚರಿಸುತ್ತಿದ್ದವು. ಸದರಿ ದಿನ ನಾವು ರಸ್ತೆಯ ಎಡಭಾಗದಲ್ಲಿ ಇದ್ದೇವು. ನಾನು ಸದರಿ ದಿನ ಗಾಡಿ ಬರುವುದನ್ನು 8 ರಿಂದ 10 ಅಡಿ ದೂರದಿಂದ ನೋಡಿರುತ್ತೇನೆ. ಸದರಿ ದಿನ ಡಾಂಬರ ರಸ್ತೆಯ ಅರ್ಧ ಭಾಗದಲ್ಲಿ ಕುರಿಗಳು ಹೋಗುತ್ತಿದ್ದವು. ಸದರಿ ದಿನ ಗಾಡಿ ಎಷ್ಟು ವೇಗದಲ್ಲಿ ಬಂತು ಎಂದು ನನಗೆ ಹೇಳಲು ಆಗುವುದಿಲ್ಲ, ಆದರೆ ಸುಮಾರು 70 ಕಿ.ಮೀ. ವೇಗದಲ್ಲಿ ಇರಬಹುದು. ನನಗೆ ಒಂದು ಗಂಟೆಗೆ ವಾಹನಗಳು ಎಷ್ಟು ವೇಗದಲ್ಲಿ ಚಲಿಸುತ್ತವೆ ಎಂದು ಗೊತ್ತಾಗುವುದಿಲ್ಲ. ಸದರಿ ಗಾಡಿ ಬಿಳಿ ಬಣ್ಣದ ಟ್ಯಾಂಕರ, ಆದರೆ ಕಂಪನಿ ಹೇಳಲು ಆಗುವುದಿಲ್ಲ. ಸದರಿ ಗಾಡಿಯಲ್ಲಿ ಚಾಲಕ ಮಾತ್ರ ಇದ್ದ. ಸದರಿ ಗಾಡಿ

ಚಾಲಕ ಗಾಡಿಯನ್ನು ಪಕ್ಕಕ್ಕೆ ಹಾಕಿ ಡೋರ ತೆಗೆದು ಓಡಲು ಪ್ರಯತ್ನಿಸಿದಾಗ ನೋಡಿರುತ್ತೇನೆ. ಅಪಘಾತ ಸ್ಥಳದಿಂದ 12 ಅಡಿ ದೂರ ಆತ ಗಾಡಿ ನಿಲ್ಲಿಸಿರುತ್ತಾನೆ. ಕುರಿ ಮತ್ತು ಯಲ್ಲಪ್ಪ ಸತ್ತಿದ್ದನ್ನು ನೋಡಿ ನಾನು ಚಾಲಕನನ್ನು ಹಿಡಿಯಲು ಓಡಿರುತ್ತೇನೆ. ನನ್ನ ಜೊತೆ ಆರೋಪಿಯನ್ನು ಹಿಡಿಯಲು ಚಾಸಾ-6 ಬಂದಿದ್ದರು. ಪೊಲೀಸರು ಸ್ಥಳಕ್ಕೆ ಬಂದು ಆರೋಪಿಯನ್ನು ಹಿಡಿದುಕೊಂಡು ಹೋಗಿರುತ್ತಾರೆ. ನಾನು ಘಟನಾ ಸ್ಥಳದಿಂದ ಪೊಲೀಸ ಠಾಣೆಗೆ ಹೋಗಿ ಮಾಹಿತಿ ತಿಳಿಸಿ ಬಂದಿರುತ್ತೇನೆ. ನನ್ನ ಜೊತೆ ಚಾಸಾ-5 ಸಹ ಠಾಣೆಗೆ ಬಂದಿದ್ದ. ಪೊಲೀಸರು ಬಂದು ನಂತರ ಹೆಣ ತೆಗೆದುಕೊಂಡು ಹೋಗಿರುತ್ತಾರೆ. ಆರೋಪಿಯನ್ನು ಪೊಲೀಸರು 3 ಗಂಟೆಗೆ ಕರೆದುಕೊಂಡು ಹೋಗಿರುತ್ತಾರೆ.

4. ಮೃತ ಯಲ್ಲಪ್ಪನ ಶವಪಂಚನಾಮೆಯನ್ನು 11 ರಿಂದ 12 ಗಂಟೆಯವರೆಗೆ ಮಾಡಿರುತ್ತಾರೆ. ಶವ ಪಂಚನಾಮೆಯ ಕಾಲಕ್ಕೆ ಚಾಸಾ-2 ಮತ್ತು 3 ಇದ್ದರು. ದೂರನ್ನು ಶವ ಪಂಚನಾಮೆಕ್ಕಿಂತ ಪೂರ್ವದಲ್ಲಿ ಕೊಟ್ಟಿದ್ದೇವು. ಪೊಲೀಸ ಠಾಣೆಯಲ್ಲಿಯೇ ಚಾಸಾ-5 ದೂರು ಬರೆದುಕೊಟ್ಟಿರುತ್ತಾರೆ. ದೂರು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಓದಲು, ಬರೆಯಲು ಬರುವುದಿಲ್ಲ. ದೂರಿಗೆ ನಾನು, ಚಾಸಾ-5 ಮತ್ತು 6 ಸಹಿ ಮಾಡಿರುತ್ತೇವೆ. ದೂರಿನಲ್ಲಿ ಗಾಡಿ ಸಂಖ್ಯೆ ಮತ್ತು ಚಾಲಕನ ಹೆಸರು ಹೇಳಿ ಬರೆಸಿರುತ್ತೇನೆ. ದೂರಿನಲ್ಲಿ ಇರುವ ಗಾಡಿ ಸಂಖ್ಯೆ ಕೆಎ-20/7745 ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

5. ಚಾಲಕನ ಹೆಸರನ್ನು ಸ್ಥಳದಲ್ಲಿಯೇ ನಾನೇ ಕೇಳಿ, ತಿಳಿದುಕೊಂಡಿರುತ್ತೇನೆ. ದೂರು ನೀಡಲು ಬಂದಾಗ ಕುರಿಗಳನ್ನು ಸ್ಥಳದಲ್ಲಿಯೇ ಬಿಟ್ಟು ಬಂದಿರುತ್ತೇವೆ. ಪೊಲೀಸರು ನನ್ನ ಎಷ್ಟು ಹೆಬ್ಬಟ್ಟು ಗುರುತು ಪಡೆದಿರುತ್ತಾರೆ ಎಂದು ನೆನಪಿಲ್ಲ. ಘಟನಾ ಸ್ಥಳದ ಪಕ್ಕದ ಗಾರ್ಡನನಲ್ಲಿ ಒಬ್ಬ ವ್ಯಕ್ತಿ ಇದ್ದ. ಮದಲಗಟ್ಟಿ ಗ್ರಾಮದ ಜನರು ಸಹ ಸ್ಥಳಕ್ಕೆ ಬಂದಿದ್ದರು.

6. ಕುರಿ ಪಂಚನಾಮೆ ಬೆಳಿಗ್ಗೆ 8 ರಿಂದ 9 ಗಂಟೆಗೆ ಮಾಡಿರುತ್ತಾರೆ. ಆ ಸಮಯದಲ್ಲಿ ಎಷ್ಟು ಜನ ಇದ್ದರು ಎಂದು ನೆನಪಿಲ್ಲ. ಕುರಿ ಪಂಚನಾಮೆಗೆ 4 ಜನ ಸಹಿ

ಮಾಡಿರುತ್ತಾರೆ. ಕುರಿ ಪಂಚನಾಮೆಗೆ ಚಾಸಾ-2 ಮತ್ತು ಯಮನೇಶ ಎಂಬುವವರು ಸಹಿ ಮಾಡಿರುತ್ತಾರೆ.

7. ಆದಾದನಂತರ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಅಪಘಾತ ಆದ ನಂತರ ಠಾಣೆಗೆ ಬಂದು ಹೇಳಿಕೆ ನೀಡಿದ ಬಗ್ಗೆ ನನಗೆ ನೆನಪಿಲ್ಲ. ಲಾರಿಯ ಮುಂದಿನ ಭಾಗ ಯಲ್ಲಪ್ಪನಿಗೆ ಡಿಕ್ಕಿ ಪಡಿಸಿದೆ. ಮೊದಲು ಯಲ್ಲಪ್ಪನ ಮೇಲೆ ಹಾದು, ನಂತರ ಕುರಿಗಳ ಮೇಲೆ ಲಾರಿ ಹತ್ತಿತ್ತು. ಕುಷ್ಟಗಿಯಿಂದ ಗಜೇಂದ್ರಗಡಕ್ಕೆ ಹೋಗುವ ರಸ್ತೆಯ ಎಡಭಾಗದಲ್ಲಿ ಅಪಘಾತ ಆಗಿದೆ. ಅಪಘಾತ ಡಾಂಬರ ರಸ್ತೆಯ ಮೇಲೆ ಆಗಿದೆ. ಲಾರಿ  ಚಾಲಕ ಲೈಟ ಹಚ್ಚಿಕೊಂಡು ಬಂದಿದ್ದ. ಕುರಿಗಳಿಗೆ ನಾನು ವಿಮೆ ಮಾಡಿಸಿಲ್ಲ. ಮೃತ ಯಲ್ಲಪ್ಪ ನನ್ನ ಸಂಬಂಧಿ ಅಲ್ಲ. ಆತನ ಕುಟುಂಬದವರು ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಮೃತನ ಕುಟುಂಬದವರಿಗೆ ಪೋನ್ ಮಾಡಿ ನಾನು ಮಾಹಿತಿ ತಿಳಿಸಿರುತ್ತೇನೆ.

8. ಸದರಿ ದಿನ ಕುರಿ ಅಪಘಾತದಿಂದ ಸತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ಲಾರಿ ಹೊಡೆದುಕೊಂಡು ಬಂದು ಅಪಘಾತ ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಸ್ವಂತ ಯಾವುದೇ ಕುರಿ ಹೊಂದಿಲ್ಲ ಎಂದರೆ ಸರಿಯಲ್ಲ. ಕುರಿಗಳು ಬೇರೆ ಯಾವುದೇ ಗಾಡಿಗೆ ಡಿಕ್ಕಿಪಡಿಸಿಕೊಂಡು ಸತ್ತಿವೆ ಎಂದರೆ ಸರಿಯಲ್ಲ. ಡಿಕ್ಕಿ ಪಡಿಸಿದ ಗಾಡಿ ಸಿಗದ ಕಾರಣ ಆರೋಪಿಯ ಗಾಡಿ ಹಿಡಿದು ಸುಳ್ಳು ಪ್ರಕರಣ ದಾಖಲಿಸಿರತ್ತೇವೆ ಎಂದರೆ ಸರಿಯಲ್ಲ. ಕುರಿಗಗಳಿಗೆ ವಿಮೆ ಇಲ್ಲದ ಕಾರಣ, ಮಾಲೀಕರು ಬೈಯುತ್ತಾರೆ ಎಂದು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಯಲ್ಲಪ್ಪ ನಡು ರಸ್ತೆಗೆ ಹೋಗಿ ಯಾವುದೋ ಗಾಡಿಗೆ ಟಚ್ ಆಗಿ, ಕೆಳಗೆ ಬಿದ್ದು ತಲೆಗೆ ಗಾಯ ಆಗಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ.ನನಗೆ ಯಾವುದೇ ಅಕ್ಷರ ಮತ್ತು ಅಂಕಿ ಗುರುತು ಹಿಡಿಯಲು ಆಗದಿದ್ದರೂ ಸಹ ಚಾಸಾ-5 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಟೋಗಳನ್ನು ಪಡಿಹಾರ ಪಡೆಯಲು ಬೇರೆ ಸತ್ತ ಕುರಿಗಳ ಹತ್ತಿರ ಪೊಟೋ ತೆಗೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಿನ ಕತ್ತಲು ಇದ್ದ ಕಾರಣ ನಾನು ಯಾವುದೇ ಲಾರಿ ಸಿಗದ ಕಾರಣ ಆರೋಪಿಯ

ಲಾರಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-5 ರವರೇ ತಾನೇ ಬರೆದು ದೂರು ನೀಡಿದ್ದು ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತ ಆಗಿಲ್ಲ ಹಾಗೂ ಆರೋಪಿ ಸ್ಥಳದಲ್ಲಿ ಇರಲಿಲ್ಲ ಮತ್ತು ಅದು ವೇಗವಾಗಿ ಬಂದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**